ಅ) ಕೊಡಗು ಜಿಲ್ಲೆಯಲ್ಲಿ 3 ತಾಲ್ಲೂಕುಗಳಿದ್ದು, ಪ್ರಥಮವಾಗಿ ಸೋಮವಾರಪೇಟೆ ತಾಲ್ಲೂಕನ್ನು ರೀಸರ್ವೆ ಮಾಡಿಸಲು ತೆಗೆದುಕೊಂಡು ಸದ್ರಿ ತಾಲ್ಲೂಕಿನ ಒಟ್ಟು 298 ಗ್ರಾಮಗಳ ಪೈಕಿ 270 ಗ್ರಾಮಗಳ ಮರುಭೂಮಾಪನಾ ಕಾರ್ಯವನ್ನು ಪೂರೈಸಲಾಗಿದೆ. 28 ಗ್ರಾಮಗಳು ಬಾಕಿ ಇರುತ್ತದೆ. ಈ ಕಾರ್ಯಕ್ಕಾಗಿ ಒಟ್ಟು ರೂ. 11,94,88000ಗಳನ್ನು ಬಿಡುಗಡೆ ಮಾಡಲಾಗಿತ್ತು.

ಆ) ಪುನರ್ ಭೂಮಾಪನಾ ಕಾರ್ಯಕ್ಕಾಗಿ ಒಟ್ಟು 8,45,28,294 ರೂಪಾಯಿಗಳು ಖರ್ಚಾಗಿರುತ್ತವೆ. ಈ ಕೆಲಸವನ್ನು ನಿರ್ವಹಿಸಲು ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಲಾಗಿತ್ತು. ಈ ಹುದ್ದೆಗಳನ್ನು 1.1.95ರಿಂದ ರದ್ದುಗೊಳಿಸಿದ ಪ್ರಯುಕ್ತ ಈ ಕಾರ್ಯ ಸ್ಥಗಿತಗೊಂಡಿರುತ್ತದೆ.

ಕೊಡಗು ಜಿಲ್ಲೆಯ ಸಿದ್ದಾಪುರ ಬಳಿ ಕಾರಿನಲ್ಲಿ ಚಲಿಸುವಾಗ ಮೃತಪಟ್ಟ ವ್ಯಕ್ತಿಗಳಿಗೆ ಪರಿಹಾರ

2779: (3806)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಈ ವರ್ಷದ ಮಳೆಯಿಂದಾಗಿ ಕೊಡಗು ಜಿಲ್ಲೆಯ ಸಿದ್ದಾಪುರದ ಬಳಿ ಮೂವರು ವ್ಯಕ್ತಿಗಳು ಕಾರಿನಲ್ಲಿ ಚಲಿಸುತ್ತಿರುವಾಗ ನದಿಯಲ್ಲಿ ಕೊಚ್ಚಿ ಸಾವಿಗೀಡಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮೃತ ವ್ಯಕ್ತಿಗಳ ವಾರಸುದಾರರಿಗೆ ಸರ್ಕಾರ ಪರಿಹಾರ ನೀಡಿದೆಯೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಬಂದಿದೆ.

ಆ) ಪರಿಹಾರ ನೀಡುವ ಬಗ್ಗೆ ಸ್ಪಷ್ಟೀಕರಣ ಕೋರಿರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೊಡಗು ಜಿಲ್ಲೆಯಲ್ಲಿ ದೇವಸ್ಥಾನಗಳಿಗೆ ಅನುದಾನ.

2780 (3804)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ದತ್ತಿ ನಿಧಿ ವ್ಯವಸ್ಥಾಪನಾ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ದೇವಾಲಯ ಎಷ್ಟು?

ಆ) ಈ ದೇವಾಲಯಗಳಿಗೆ ಸೇರಿರುವ ಆಸ್ತಿ ಪಾಸ್ತಿಗಳ ಮೊಬಲಗೆಷ್ಟು, ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಕಳೆದ 4 ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1) ಕೊಡಗು ಜಿಲ್ಲೆಯಲ್ಲಿ 7 ದೇವಾಲಯಗಳು, ಕೊಡಗು ದೇವಾಲಯದ ನಿಧಿ ಸಮಿತಿಯ ಉಸ್ತುವಾರಿಯಲ್ಲಿರುತ್ತದೆ.

2) ಈ ದೇವಾಲಯಗಳಿಗೆ ಸೇರಿರುವ ಆಸ್ತಿಪಾಸ್ತಿಗಳ ಒಟ್ಟು ಮೊಬಲಗು ರೂ.4.00 ಕೋಟಿ, ಕಳೆದ 4 ವರ್ಷಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರ್ಕಾರವು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

ಕ್ರ. ಸಂ.	ದೇವಾಲಯದ ಹೆಸರು ಮತ್ತು ಆದೇಶ	ಮಂಜೂರಾದ ಮೊತ್ತ
1	ಪಾಡಿ ಶ್ರೀ ಹಿಗ್ಗುತಪ್ಪ ದೇವಾಲಯದ ಆದೇಶ ಸಂ.ಸಿನ್‌ಆರ್: ಸಿಆರ್: 235: 95-96 ದಿ: 4-5-96	ರೂ. 50,000
2	ಭಾಗಮಂಡಲ ತಲಕಾವೇರಿ ದೇವಾಲಯ ಆದೇಶ ಸಂ.ಸಿಎನ್‌ಆರ್: ಸಿಆರ್: 235: 95-96 ದಿನಾಂಕ: 4-5-96	ರೂ. 50,000
3	ತಲಕಾವೇರಿ ಭಾಗಮಂಡಲದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ (ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆ) ಸರ್ಕಾರಿ ಆದೇಶ ವಾಪ್ರಯು 340:97 ದಿನಾಂಕ: 21-3-98	ರೂ. 50,00,000